8

# ಯೇಸುವಿನ ಸೇವೆಯ ಪ್ರಾರಂಭ

## (4:12-25)

ಯೇಸು ಸೈತಾನನಿಂದ ಶೋಧಿಸಲ್ಪಟ್ಟ ನಂತರ (4:1-11), ಆದರೆ ಹೆರೋದ್ ಅಂತಿಪಸ್ ಯೋಹಾನನ್ನು ಸೆರಮನೆಯಲ್ಲಿ ಹಾಕುವ ಮೊದಲು (4:12; ನೋಡಿರಿ 14:3-5), ಯೋಹಾನ 1:19-3:36ರಲ್ಲಿ ದಾಖಲಾಗಿರುವ ಸೇವೆಯಲ್ಲಿ ಯೇಸು ನಿರತನಾಗಿದ್ದನು. ಮಾರ್ಕ ಮತ್ತು ಲೂಕರೊಂದಿಗೆ, ಮತ್ತಾಯನು ಆ ಅವಧಿ ಹಾದು ಹೋಗಿದ್ದಾನೆ.

ಈ ಭಾಗವು (4:12-25) ಯೇಸುವಿನ ಸೇವೆಗೆ ಪರಿಚಯವಾಗಿ ಉಪಕರಿಸುತ್ತದೆ ಮತ್ತು ಪರ್ವತದ ಪ್ರಸಂಗಕ್ಕೆ ನಡೆಸಿರುವದರ ಕುರಿತು ಹೇಳುತ್ತದೆ (5:1-7:29). ಯೇಸು ಕಪೆರ್ನೌಮಿನಲ್ಲಿ ಮನೆಮಾಡಿಕೊಂಡಿದ್ದು ದೇವರ ವಾಕ್ಯ ನೆರವೇರಿದಂತಾಯಿತೆಂದು ಮತ್ತಾಯನು ಚಿತ್ರಿಸಿದ್ದಾನೆ (4:12-17), ಆತನ ನಾಲ್ಕು ಜನ ಶಿಷ್ಯರನ್ನು ಕರೆದಿರುವದು ದಾಖಲಾಗಿದೆ (4:18-22), ಮತ್ತು ಆತನ ಸೇವೆಯ ಸಾರಾಂಶವನ್ನು ಒದಗಿಸುತ್ತದೆ ಮತ್ತು ಅದರಿಂದ ಪ್ರಾಂತಗಳು ಪರಿಣಾಮ ಹೊಂದಿದವು (4:23-25).

### ಕಪೆರ್ನೌಮಿನಲ್ಲಿ ವಾಸಸ್ಥಳ (4:12-17)

**[12]ಯೋಹಾನನು ಸೆರೆಗೆ ಬಿದ್ದನೆಂದು ಯೇಸು ಕೇಳಿ ಆ ಸ್ಥಳವನ್ನು ಬಿಟ್ಟು ಗಲಿಲಾಯ ಸೀಮೆಗೆ ಹೊರಟು ಹೋದನು. [13]ಬಳಿಕ ನಜರೇತೆಂಬ ಊರನ್ನು ಬಿಟ್ಟು ಜೆಬುಲೋನ್ ನೆಫ್ತಲೀಮ್ ಎಂಬ ನಾಡುಗಳಿಗೆ ಬಂದು ಸಮುದ್ರದ ಹತ್ತಿರದಲ್ಲಿರುವ ಕಪೆರ್ನೌಮೆಂಬ ಊರಿನಲ್ಲಿ [14]ಮನೆಮಾಡಿಕೊಂಡು ಇದ್ದನು. ಇದರಿಂದ ಯೆಶಾಯನೆಂಬ ಪ್ರವಾದಿಯ ಮುಖಾಂತರ ಹೇಳಿಸಿರುವ ಮಾತು ನೆರವೇರಿತು; ಆ ಮಾತು ಏನೆಂದರೆ -**

**[15]ಜೆಬುಲೋನ್ ಸೀಮೆ ಮತ್ತು ನೆಫ್ತಲೀಮ್ ಸೀಮೆ,**
**ಯೊರ್ದನಿನ ಆಚೆ, ಸಮುದ್ರದ ಕಡೆಗಿರುವ ಸೀಮೆ,**
**ಅನ್ಯಜನಗಳಿರುವ ಗಲಿಲಾಯ ಸೀಮೆ,**
**[16]ಕತ್ತಲಲ್ಲಿ ವಾಸಿಸಿದ ಈ ಸೀಮೆಗಳು ಜನರಿಗೆ**
**ದೊಡ್ಡ ಬೆಳಕು ಕಾಣಿಸಿತು;**
**ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ**
**ಸೂರ್ಯೋದಯವಾಯಿತು ಎಂಬದು.**

**[17]ಅಂದಿನಿಂದ ಯೇಸು - ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿ ಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು.**

**ವಚನ 12.** ಕ್ರಿಸ್ತನ ಸೇವೆಯ ಅವಧಿಯಲ್ಲಿಯೆ **ಯೋಹಾನನ್ನು ಅವರ ಸೆರೆಗೆ ತೆಗೆದುಕೊಂಡಾಗ್ಯೂ**, ಮತ್ತಾಯನು ಸೆರೆಮನೆಯ ವಿವರಣೆಯನ್ನು 14ನೇ ಅಧ್ಯಾಯದವರೆಗೆ ಕಾಯ್ದಿಟ್ಟಿದ್ದಾನೆ (14:1-12). ಯಾವಾಗ **ಯೇಸು** ಯೋಹಾನನ ಕುರಿತು ವಿಷಯ ಕೇಳಿದನೋ **ಗಲಿಲಾಯ ಸೀಮೆಗೆ ಹೊರಟು ಹೋದನು.** ಆತನು ಯಾಕೆ ಅಲ್ಲಿಗೆ ಹೋದನು ಎಂಬುದಕ್ಕೆ ನಿರ್ದಿಷ್ಟವಾದ ಕಾರಣ ತಿಳಿಸಿರುವುದಿಲ್ಲ. “ಹಿಂತೆಗೆ” ಎನ್ನುವ ಕ್ರಿಯಾಪದ ಸಹ ಭಾಷಾಂತರ ಮಾಡಿದ್ದಾರೆ. “ಬಿಟ್ಟನು” ಅಥವಾ “ಹೊರಡು” ಎಂದು ಸಹ ಅನುವಾದಿಸಲಾಗಿದೆ. ಅನೇಕ

ಅಪಾಯಕರ ಸಂಧರ್ಭದಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಹೋಗುವದನ್ನು ಸಾರಿ ಮತ್ತಾಯನ ಸುವಾರ್ತೆಯಲ್ಲಿ ತೋರಿಸಿದ್ದಾನೆ (2:12-14, 22; 12:15; 14:13; 15:21). ಆ ಸಮಯದಲ್ಲಿ, ಯೋಹಾನನ ಸೇವೆಯಲ್ಲಿ ಸಹಕರಿಸಿದವರೆಲ್ಲರು ತಮ್ಮನ್ನು ಆತನು ಸೇವೆ ಮಾಡಿದ ಸ್ಥಳದಿಂದ ತಾವು ದೂರವಾಗುವದು ಅದು ಅವರಿಗೆ ಸಮಯೋಚಿತವಾಗಿತ್ತಾ? ಬಹುಶಃ ಆಗಿರಲಿಲ್ಲ - ಯಾಕೆಂದರೆ ಹೆರೋದ್ ಅಂತಿಪಸ್, ಯೋಹಾನನನ್ನು ಪೆರಿಯಾ (ಯೋರ್ದಾನ ಸಮೀಪ ಪ್ರದೇಶ)ಯಲ್ಲಿ ಸೆರೆಯಾಗಿ ಇರಿಸಿದನು, ಮತ್ತು ಯೇಸು ಹೋಗಿರುವ ಗಲಿಲಾಯ ಪ್ರಾಂತವನ್ನು ಆಳಿದನು. "ಅದು ಬಹುಶಃ ಆಗಿರಬಹುದು," Leon Morris ಗಮನಿಸಿದಂತೆ, "ಯೋಹಾನನ ಸೇವೆ ಮುಕ್ತಾಯವಾಗಿದ್ದರಿಂದ ಇನ್ನು ಮುಂದೆ ತನ್ನ ಸೇವೆ ಪ್ರಾರಂಭಿಸುವ ಅಗತ್ಯವಿದೆ ಎಂದು ಯೇಸು ಅವಲೋಕಿಸಿದರು; ಯೋಹಾನನು ತನ್ನ ಸೇವೆ ಅಡವಿಯಲ್ಲಿ ಮಾಡಿದ್ದರಿಂದ ಈಗ ಯೇಸು ತನ್ನ ಸೇವೆ ಹೆಚ್ಚಾಗಿ ಗಲಿಲಾಯ ಪ್ರಾಂತದಲ್ಲಿ ತನ್ನ ಜನರ ಮಧ್ಯದಲ್ಲಿ ಮಾಡಬೇಕಾಗಿತ್ತು."[1]

ಯೇಸು ಯುದಾಯ ಮತ್ತು ಪರಿಶುದ್ಧ ಪಟ್ಟಣವಾದ ಯೆರೂಸಲೇಮನ್ನು ಬಿಟ್ಟು ಗಲಿಲಾಯ ಪ್ರಾಂತವನ್ನು ತನ್ನ ಸೇವಾ ಕೇಂದ್ರವಾಗಿ ಆರಿಸಿಕೊಂಡನು. ಯೂದಾಯದವರು ಕೆಲವು ಸಾರಿ ಗಲಿಲಾಯದವರನ್ನು ಅವರು ಹಿಂದುಳಿದವರು ಮತ್ತು ಅನಕ್ಷರಸ್ತರು ಎಂದು ಕೀಳು ಭಾವನೆಯಿಂದ ನೋಡುತ್ತಿದ್ದರು (26:69, 73; ಯೋಹಾನ 7:41, 52; ಅಪೊಸ್ತಲರ ಕೃತ್ಯಗಳು 2:7; 4:13). ಆದಾಗ್ಯೂ ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ (1 ಕೊರಿಂಥ 1:27).

**ವಚನ 13.** ಯೇಸು **ನಜರೇತಿಗೆ** ತಿರುಗಿ ಬಂದನು, ಅದು ಆತನ ಸ್ವಂತ ಊರಾಗಿತ್ತು (2:23). ಹಾಗಿದ್ದರೂ, ಆತನು ಸ್ವಲ್ಪ ಸಮಯದ ನಂತರ, ಆ ಸ್ಥಳವನ್ನು ಬಿಟ್ಟನು - ಬಹುಶಃ ಆ ಜನರು ಆತನನ್ನು ನಿರಾಕರಿಸಿದ ಕಾರಣದಿಂದಾಗಿರಬಹುದು (ಲೂಕ 4:16-31)[2] - ಮತ್ತು ಆತನು **ಸಮುದ್ರದ ಪಕ್ಕದಲ್ಲಿರುವ ಕಪೆರ್ನೌಮನಲ್ಲಿ** ತನ್ನ ಕಾರ್ಯಸ್ಥಾನವನ್ನು ಸ್ಥಾಪಿಸಿದನು. ಈ ಪಟ್ಟಣವು ನಂತರದ ದಿನಗಳಲ್ಲಿ "ಆತನ ಸ್ವಂತ ಪಟ್ಟಣವಾಯಿತು" ಎಂದು ಸೂಚಿಸಲಾಗಿದೆ (9:1). ಈ ಪಟ್ಟಣವು ಮೂಲತಃ **ಜೆಬುಲೇನ್ ಮತ್ತು ನೆಫ್ತಲೀನ್** ವಂಶದವರಿಗೆ ಕೊಟ್ಟ ಪ್ರಾಂತದಲ್ಲಿ ಇದೆ.

ಕಪೆರ್ನೌಮೆ ಇರುವ ಪ್ರದೇಶವು ತರ್ಕಬದ್ಧವಾಗಿ ಟೆಲ್‌ಹುಮ್ ಸ್ಥಳವಾಗಿದೆ, ಈ ಸ್ಥಳವು ಗಲಿಲಾಯ ಸಮುದ್ರದ ವಾಯುವ್ಯ ದಿಕ್ಕಿನ ಅಂತ್ಯದಲ್ಲಿದೆ. 1905ರಲ್ಲಿ Franciscans ರವರು ಭೂಶೋಧನೆ ಮಾಡಿ ಸರಿಯಾದ ಪುರಾವೆಗಳ ಮುಖಾಂತರ ಈ ಸ್ಥಳ ಹಳೆ ಕಪೆರ್ನೌಮೆ ಎಂದು ದೃಢಪಡಿಸಿದರು. "ಕಪೆರ್ನೌಮೆ" ಎಂದರೆ "ನಹೂಮನ ಹಳ್ಳಿ" ಎಂದರ್ಥ, ಮತ್ತು ಇದು ಹಳೆ ಒಡಂಬಡಿಕೆಯ ಪ್ರವಾದಿಯ ಸ್ವಂತ ಊರಾಗಿರಬಹುದು. ನಹೂಮ ಎಂದರೆ "ಕನಿಕರವುಳ್ಳವನು" ಎಂದರ್ಥ. ಜನರ ಮನಸ್ಸನ್ನು ಗಮನಿಸಿ ಈ ಹಳ್ಳಿಗೆ ಈ ಹೆಸರನ್ನು ಕೊಟ್ಟಿರಬಹುದು.

ಕಪೆರ್ನೌಮೆ ಯೇಸುವಿನ ಸುವಾರ್ತೆ ಸಾರಲು ಮತ್ತು ಬೋಧಿಸಲು ಕೇಂದ್ರ ವಾಗಿತ್ತು. ಇದು ಗಲಿಲಾಯ ಸಮುದ್ರದ ದಡದಲ್ಲಿ ಇರುವದರಿಂದ ಸಮುದ್ರವನ್ನು ಕಿನ್ನರೆತ್ ಸಮುದ್ರವೆಂದು (ಅರಣ್ಯಕಾಂಡ 34:11), ಗೇನಜರೇತ ಕೆರೆ (ಲೂಕ 5:1), ಮತ್ತು ಥಿಬೇರಿಯದ ಸಮುದ್ರ ಎಂತಲೂ ಕರೆಯುತ್ತಿದ್ದರು (ಯೋಹಾನ 21:1). ಈ ಸಮುದ್ರ ಹೆಚ್ಚಿನ ನೀರಿನಿಂದ ತುಂಬಿರುವುದಿಲ್ಲ. ಇಂದು ಈ ಸಮುದ್ರವು ಉತ್ತರದಿಂದ ದಕ್ಷಿಣಕ್ಕೆ ಹದಿಮೂರು ಮೈಲುಗಳು ಉದ್ದ ಮತ್ತು ಎಂಟು ಮೈಲು ಪೂರ್ವದಿಂದ ಪಶ್ಚಿಮಕ್ಕೆ ಅಗಲವಾಗಿರುತ್ತದೆ. ಸಮುದ್ರ ಮಟ್ಟದಿಂದ ಏಳುನೂರು ಅಡಿ ಕೆಳಮಟ್ಟದಲ್ಲಿದೆ. ಇದರ ದಡದಲ್ಲಿ ಪಾಲೇಸ್ತೀನದ ಅನೇಕ ಜನರು ವಾಸ ಮಾಡುವ ಕೇಂದ್ರಗಳಿವೆ. ಇದರ ದಂಡೆಯಲ್ಲಿ ಒಂಭತ್ತು ಜನಸಾಂದ್ರತೆ ಇರುವ ಪಟ್ಟಣಗಳಿವೆ, ಅದರಲ್ಲಿ ಇಂದು ಕೇವಲ ಥಿಬೇರಿಯ ಮಾತ್ರ ಉಳಿದುಕೊಂಡಿದೆ.

**ವಚನ 14.** ಯೇಸು ಕಪೆರ್ನೌಮಿಗೆ ಹೋಗಿದ್ದು ಆಕಸ್ಮಿಕವಲ್ಲ, **ಇದರಿಂದ ಯೆಶಾಯನೆಂದು ಪ್ರವಾದಿಯ ಮುಖಾಂತರ ಹೇಳಿರುವ ಮಾತು ನೆರವೇರಿತು** ಎಂದು ಮತ್ತಾಯನು ಸೂಚಿಸಿದ್ದಾನೆ. ಆ ವಚನಗಳನ್ನು ಯೆಶಾಯ 9:1, 2 ರಿಂದ ತೆಗೆದುಕೊಂಡು ಮತ್ತಾಯ ಹೇಳುತ್ತಿದ್ದಾನೆ.

**ವಚನ 15.** ಮುಖ್ಯ ಹೆದ್ದಾರಿಗಳು ರಸ್ತೆಗಳು ಕಪೆರ್ನೌಮಗೆ ಸೇರುತ್ತವೆ. ಈ ನಗರವು ಮುಖ್ಯ ವ್ಯಾಪಾರಕ್ಕಾಗಿ ಸಿರಿಯಾದಿಂದ ಐಗುಪ್ತಕ್ಕೆ ಮುಖ್ಯಮಾರ್ಗ ಹೊಂದಿದೆ. ಅದನ್ನು **ಸಮುದ್ರದ ಮಾರ್ಗ** ಎಂದು ಕರೆಯುತ್ತಾರೆ (ಯೆಶಾಯ 9:1). ವಿಶೇಷವಾಗಿ ಗಲಿಲಾಯವನ್ನು ಸೂಚಿಸಿ Donald A. Hagner ಹೀಗೆ ವಿವರಿಸಿದ್ದಾರೆ,

> "ಸಮುದ್ರ ಮಾರ್ಗವು" ... ರೋಮಾ ಸರ್ಕಾರದ ರಸ್ತೆಯಾಗಿದ್ದು (the *via maris*) ಮೆಡಿಟರೇನಿಯನ ಸಮುದ್ರ ತೀರದ ಮೇಲೆ ಕೈಸರೆಯೊಂದಿಗೆ ದಮಾಸ್ಕಸನ್ನು ಸಂಪರ್ಕಿಸುತ್ತದೆ ಯೇಸುವಿನ ಸೇವೆಯ ಪ್ರಮುಖ ಪಟ್ಟಣಗಳು ಬೆತ್ಸಾಯಿಂದ ಮತ್ತು ಕಪೆರ್ನೌಮಗೆ ಸಾಗುವ ಗಲಿಲಾಯ ಸಮುದ್ರದ ಪಶ್ಚಿಮ ತೀರದವರೆಗೆ ಮುಂದುವರಿದಿದೆ.[3]

ಕಪೆರ್ನೌಮ ಪಟ್ಟಣವು ಪಾಲೇಸ್ತೀನದಲ್ಲಿ ಬಹಳ ಜನಸಾಂದ್ರತೆಯ ಮಧ್ಯೆದಲ್ಲಿ ಅಚ್ಚುಕಟ್ಟಾಗಿತ್ತು. ಯೆಹೂದ್ಯ ಇತಿಹಾಸಕಾರನಾದ Josephus ಗಲಿಲಾಯದ ರಾಜ್ಯಪಾಲರಾಗಿದ್ದರು, ಈ ಕ್ಷೇತ್ರದಲ್ಲಿ 240 ಹಳ್ಳಿಗಳು ಮತ್ತು ಪಟ್ಟಣಗಳು ಇದ್ದವು, ಅದರಲ್ಲಿ ಪ್ರತಿಯೊಂದು ಪಟ್ಟಣವು ಕನಿಷ್ಟ ಹದಿನೈದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಯಾವ ಪಟ್ಟಣ ಹೊಂದಿರಲಿಲ್ಲ ಎಂದು ಬರೆದಿದ್ದಾರೆ.[4]

ಗಲಿಲಾಯಾದ ಜನಸಾಂದ್ರತೆ ಅದು ಬಹು ರಾಷ್ಟ್ರೀಯ ಜನರನ್ನು ಹೊಂದಿತ್ತು. ಕ್ರಿ.ಪೂ. ಎಂಟನೆಯ ಶತಮಾನದಿಂದ ಎರಡನೆಯ ಶತಮಾನದವರೆಗೆ ಅನ್ಯಜನರಿಂದ ಆಳಲ್ಪಟ್ಟಿದ್ದರಿಂದ, ಅನ್ಯ ದೇಶಗಳಿಂದ ಸುತ್ತುವರಿದಿರುವದರಿಂದ, ಹೆಚ್ಚಾಗಿ ಅನ್ಯಜನರು ಅಲ್ಲಿ ಇದ್ದುದರಿಂದ ಇದನ್ನು **ಅನ್ಯ ಜನಗಳಿರುವ ಗಲಿಲಾಯ** ಎಂದು ಗುರುತಿಸಿದರು (ಯೆಶಾಯ 9:1). ಸಿರಿಯಾ ದೇಶವು ಗಲಿಲಾಯ ಉತ್ತರ ಮತ್ತು ಪೂರ್ವಕ್ಕೆ ಇದೆ, ಪಶ್ಚಿಮದಲ್ಲಿ Phoenicians ರವರ ಸಂತತಿಯವರು ಇದ್ದರು, ಮತ್ತು ದಕ್ಷಿಣದಲ್ಲಿ ಸಮಾರ್ಯದವರು ಇದ್ದರು. ಮೊದಲಿನಿಂದಲೂ ಗಲಿಲಾಯಕ್ಕೆ ಅನ್ಯರು ಅಕ್ರಮವಾಗಿ ಬರುತ್ತಿದ್ದರಿಂದ ಸೊಲೊಮೋನನು ತೂರಿನ ಅರಸನಾದ ಹೀರಾಮನಿಗೆ ಗಲಿಲಾಯ ಪ್ರಾಂತದಲ್ಲಿನ ಇಪ್ಪತ್ತು ಪಟ್ಟಣಗಳನ್ನು ಕೊಟ್ಟನು (1 ಅರಸುಗಳು 9:11). ಇದೂ ಅಲ್ಲದೆ, ಇಸ್ರಾಯೇಲರು ಕೊಟ್ಟಿರುವ ಸ್ವಾಸ್ತ್ಯದಿಂದ ಅವರಿಗಿಂತಲೂ ಮೊದಲು ವಾಸ ಮಾಡಿದ ಅನ್ಯಮತಸ್ತರನ್ನು ಸಂಪೂರ್ಣವಾಗಿ ಅವರ ದೇಶ ದಿಂದ ಅಟ್ಟಿಬಿಡಲಿಲ್ಲ (ನ್ಯಾಯಸ್ಥಾಪಕರು 1:30, 33). ಗಲಿಲಾಯವು ಈ ಜನರ ಸಂಸ್ಕಾರ ಮತ್ತು ಪದ್ಧತಿಗಳಿಂದ ಪಾಲೇಸ್ತೀನದಲ್ಲಿ ಯಾವುದೇ ಭಾಗದಲ್ಲಿ ಇರದ ಪ್ರಭಾವ ಇಲ್ಲಿ ಪ್ರಭಾವಹೊಂದಿತ್ತು. ಯಾವಾಗಲೂ, "ಹೊಸ ಪದ್ಧತಿಗಳನ್ನು ಪ್ರೀತಿಸುತ್ತಿದ್ದರು, ಮತ್ತು ಸ್ವಾಭಾವಿಕವಾಗಿ ಬದಲಾವಣೆಗಳಿಗೆ ವಿಲೇವಾರಿಯಾಗಿದ್ದರು, ಮತ್ತು ಪ್ರಚೋದಕ ವರ್ತನೆಯಿಂದ ಅವರು ಸಂತೋಷಪಡುತ್ತಿದ್ದರು ಎಂದು Josephus ಹೇಳಿದ್ದಾರೆ."[5]

**ವಚನ 16.** ಅಶೂರ್ಯರಿಂದ ನಾಶನ ಹೊಂದಿ ಆತ್ಮೀಕ **ಕತ್ತಲಲ್ಲಿ** ಮುಳುಗಿದ್ದ ಈ ಪ್ರಾಂತವು ಮುಂದೆ ಒಂದಾನ್ನೊಂದು ಕಾಲದಲ್ಲಿ ದೇವರ ಸತ್ಯವೆಂಬ **ಬೆಳಕನ್ನು** ನೋಡುವದೆಂದು ಹೇಳುವ ಪ್ರವಾದನೆಯ (ಯೆಶಾಯ 9:2) ಉಲ್ಲೇಖನೆ ಕಣ್ಣು ಮುಂದೆಯೇ ಇಟ್ಟಂತಾಯಿತು. ಲೋಕಕ್ಕೆ ಬರುವ ಆ ಬೆಳಕು ಮೊದಲು ಯೂದಾಯ ಅಥವಾ ಯೆರೂಸಲೇಮಿಗೆ ಕಾಣಿಸುವದಿಲ್ಲ ಆದರೆ ಮೊದಲು ಕತ್ತಲಲ್ಲಿ ಇರುವ ಈ ಪ್ರದೇಶದಲ್ಲಿ ಕಾಣಿಸುತ್ತದೆಂದು ಪ್ರವಾದಿಯು ಪ್ರತಿಪಾದಿಸುತ್ತಾನೆ. "ಕತ್ತಲು" ಎನ್ನುವ ಶಬ್ದವು ಆತ್ಮಿಕ ಕುರುಡುತನ, ನೀತಿ

ಭ್ರಷ್ಟತೆ, ಅಥವಾ ನಿರೀಕ್ಷೆಯಿಲ್ಲದ ಆಶಾಭಂಗಗಳನ್ನು ವರ್ಣಿಸುತ್ತದೆ. ಇದಕ್ಕೆ ತದ್ವಿರುದ್ಧವಾದ, "ಬೆಳಕನ್ನು," ಆತ್ಮೀಕ ಅಂತರ್ ದೃಷ್ಟಿಯನ್ನು ಅಥವಾ ಜ್ಞಾನವನ್ನು, ನೀತಿಯ ಜೀವಿತ, ಮತ್ತು ಆನಂದವನ್ನು ಸೂಚಿಸುತ್ತದೆ. ಯೇಸು ಕತ್ತಲೆಯ ಆ ಪ್ರದೇಶಕ್ಕೆ ಬಂದದ್ದರಿಂದ ಬಹಳ ದಿನಗಳ ಕಾಲ ಅದರ ಮೇಲೆ ಆವರಿಸಿರುವ ಅಂಧಕಾರವನ್ನು ತೊಲಗಿಸಿ ಸತ್ಯವೆಂಬ ದೊಡ್ಡ ಬೆಳಕನ್ನು ಪ್ರಕಾಶಿಸಿದನು. ಯೇಸುವೇ "ಬೆಳಕು" ಆಗಿದ್ದಾನೆ (ಯೋಹಾನ 1:4, 8, 9; 3:19; 8:12; 12:46).

ಯೇಸು ಯಾವ ಜನರಿಗೋಸ್ಕರ ಬಂದಿದನೋ ಆ **ಜನರು** ಯೆಹೂದ್ಯರಾಗಿದ್ದರು. ಮತ್ತಾಯನು ಅ ರಾಷ್ಟ್ರೀಯತೆಯನ್ನು ಗುರುತಿಸಲು ಗ್ರೀಕ್ ಶಬ್ದಗಳನ್ನು ಕ್ರಮವಾಗಿ ಉಪಯೋಗಿಸಿದ್ದಾನೆ (1:21; 2:4, 6; 4:23; 9:35; 13:15; 15:8; 21:23; 26:3, 5, 47; 27:1, 25, 64). "ಕಳೆದು ಹೋಗಿರುವ ಕುರಿಯಂತಿರುವ ಇಸ್ರಾಯೇಲರೇ" ಯೇಸುವಿನ ಸೇವೆಯ ಗುರಿಯಾಗಿದ್ದರು (10:6; 15:24). ಈ ಯೆಹೂದ್ಯರು "ಅನ್ಯಜನರು" ವಾಸವಾಗಿರುವ ಗಲಿಲಾಯದಲ್ಲಿ ವಾಸವಾಗಿರುವ ವಾಸ್ತವವು "ಎಲ್ಲಾ ದೇಶಗಳಿಗಾಗಿ" ಸಾರ್ವತ್ರಿಕ ಸ್ವರೂಪದ ಸುವಾರ್ತಾ ಸಂದೇಶವು ಮುನ್ಸೂಚನೆಯಾಗಿತ್ತು (28:19; 1:3; 2:1ರ ಮೇಲೆ ಅಭಿಪ್ರಾಯ ನೋಡಿರಿ).

**ವಚನ 17. ಅಂದಿನಿಂದ** ಯೇಸುವಿನ ಕಾರ್ಯ ವಿಧದಲ್ಲಿ ಒಂದು ಹೊಸ ಹಂತವನ್ನು ಸೂಚಿಸುತ್ತದೆ. **ಯೇಸು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು** ಎನ್ನುವ ವಾಕ್ಯಭಾಗವು ಆತನು ತನ್ನ ದೀಕ್ಷಾಸ್ನಾನ ಮತ್ತು ಯೋಹಾನನು ಸೆರೆಮನೆಯಲ್ಲಿರುವಾಗ ಅದರ ಮಧ್ಯಕಾಲದಲ್ಲಿ ಸುವಾರ್ತೆ ಸಾರಲಿಲ್ಲ ಎಂದು ಹೇಳುತ್ತಿಲ್ಲ, ಯಾಕೆಂದರೆ, ಆತನು ಗಲಿಲಾಯ ಪ್ರಾಂತದಲ್ಲಿ ಸೇವೆಮಾಡುತ್ತಿದ್ದನು ಮತ್ತು ಸುವಾರ್ತೆ ಸಾರುತ್ತಿದ್ದನು ಎಂದು ಲೂಕನು ಹೇಳುತ್ತಿದ್ದಾನೆ (ಲೂಕ 4:14, 15). "ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ದೇವರ ಸುವಾರ್ತೆಯನ್ನು ಸಾರುತ್ತಾ ಗಲಿಲಾಯ ಸೀಮೆಗೆ ಬಂದನು" ಎಂದು ಮಾರ್ಕ 1:14ರಲ್ಲಿ ದಾಖಲಿಸಲಾಗಿದೆ. "ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು" ಎಂದು ಮತ್ತಾಯನು ಪ್ರಯೋಗಿಸಿರುವ ವಾಕ್ಯವು ಯೋಹಾನನು ಅಲ್ಲಿಯವರೆಗೆ ಸಾರಾಲಾರದ ಪ್ರದೇಶಗಳಿಗೆ ಯೇಸು ಪ್ರವೇಶಿಸಿದನು ಎಂದು ಅರ್ಥಕೊಡುತ್ತದೆ. ಆತನ ಸೇವೆಯ ಮೊದಲಿನ ಭಾಗದಲ್ಲಿ ಸಾರ್ವಜನಿಕವಾಗಿ ಬೋಧಿಸಿರುವ ಬೋಧನೆಯ ಸಾರಾಂಶದ ವ್ಯಾಖ್ಯಾನವೆಂಬಂತೆ ಅದು ಕಾರ್ಯಮಾಡಿದೆ.

ಯೇಸು ಜನರಿಗೆ **ಪಶ್ಚಾತ್ತಾಪಪಡಿರಿ** ಎಂದು ಹೇಳಿದನು, ಈ ಶಬ್ದವು ಜೀವನವನ್ನು ಬದಲಾಯಿಸುವಂತೆ ನಡೆಸುವ ಮನಸ್ಸಿನ ಬದಲಾವಣೆಯನ್ನು ಸೂಚಿಸುತ್ತದೆ. **ಪರಲೋಕ ರಾಜ್ಯವು ಸಮೀಪಿಸಿದ್ದರಿಂದ** ಜನರಿಗೆ ಪಶ್ಚಾತ್ತಾಪ ಅವಶ್ಯಕವಾಗಿತ್ತು. ಆ ಸಮಯದಲ್ಲಿ ರಾಜ್ಯವು ಬಂದಿರಲಿಲ್ಲ ಆದರೆ ಅದು ಬರುವ ಕಾಲ ಹತ್ತಿರವಾಗಿತ್ತು. ದೇವರ ರಾಜ್ಯವನ್ನು ಪ್ರವೇಶಿಸಲು ಬಯಸುವವರಿಗೆ ಪಶ್ಚಾತ್ತಾಪ ಪಡುವುದು ಸಂಪೂರ್ಣ ಅವಶ್ಯಕವಾಗಿದ್ದದಾಗಿದೆ (ಲೂಕ 13:3, 5; ಅಪೊಸ್ತಲರ ಕೃತ್ಯಗಳು 2:38; 17:30). Jack P. Lewis ಹೀಗೆ ವ್ಯಾಖ್ಯಾನಿಸಿದ್ದಾರೆ, "ಈ ಒಂದು ವಿಷಯದಲ್ಲಿ ಈ ಮೊದಲೆ ಸ್ನಾನಿಕನಾದ ಯೋಹಾನನು ಬೋಧಿಸಿದ ಸಂದೇಶವನ್ನು ಯೇಸು ಬೋಧಿಸಿದ ಸಂದೇಶದಲ್ಲಿ ತೆಗೆದುಕೊಂಡನು (ಮತ್ತಾಯ 3:2) ಮತ್ತು ತರುವಾಯ ಅದೇ ಸುವಾರ್ತೆಯು ತನ್ನ ಸ್ವಂತ ಶಿಷ್ಯರು ಸಾರಿದರು ಎಂದು ತಿಳಿಸುತ್ತದೆ (ಮತ್ತಾಯ 10:7)."[6]

## ಯೇಸು ಪ್ರಥಮ ಶಿಷ್ಯರಿಗೆ ಕರೆ (4:18-22)

**18ಹೀಗಿರುವಲ್ಲಿ, ಯೇಸು ಗಲಿಲಾಯ ಸಮುದ್ರದ ಬಳಿಯಲ್ಲಿ ತಿರುಗಾಡುತ್ತಿರುವಾಗ ಅಣ್ಣತಮ್ಮಂದಿರಿಬ್ಬರು ಬಲೆಬೀಸುವದನ್ನು ಕಂಡನು; ಅವರು ಪೇತ್ರನೆನಿಸಿಕೊಳ್ಳುವ ಸೀಮೋನ,**

**ಮತ್ತು ಅವನ ತಮ್ಮನಾದ ಅಂದ್ರೆಯ. ಅವರು ಬೆಸ್ತರು, ಸಮುದ್ರದಲ್ಲಿ ಬಲೆ ಬೀಸುತ್ತಿದ್ದರು.**
**19ಅವರಿಗೆ ಆತನು - ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು**
**ಮಾಡುವೆನು ಎಂದು ಹೇಳುತ್ತಲೇ 20ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು.**
**21ಯೇಸು ಅಲ್ಲಿಂದ ಮುಂದೆ ಹೋಗಿ ಇನ್ನಿಬ್ಬರು ಅಣ್ಣತಮ್ಮಂದಿರನ್ನು ಅಂದರೆ ಜೆಬೆದಾಯನ**
**ಮಗನಾದ ಯಾಕೋಬನನ್ನೂ ಅವನ ತಮ್ಮನಾದ ಯೋಹಾನನನ್ನೂ ಕಂಡನು; ಇವರು ತಮ್ಮ**
**ತಂದೆಯಾದ ಜೆಬೆದಾಯನ ಕೂಡ ದೋಣಿಯಲ್ಲಿ ತಮ್ಮ ಬಲೆಗಳನ್ನು ಸರಿಮಾಡುತ್ತಿದ್ದರು.**
**ಆತನು ಇವರನ್ನೂ ಕರೆದನು. 22ಕೂಡಲೆ ಅವರು ದೋಣಿಯನ್ನೂ ತಮ್ಮ ತಂದೆಯನ್ನೂ**
**ಬಿಟ್ಟು ಆತನನ್ನು ಹಿಂಬಾಲಿಸಿದರು.**

ಮತ್ತಾಯನ ಈ ವಾಕ್ಯ ವಿವರಣೆಯು ಯೇಸು ತನ್ನ ಪ್ರಥಮ ನಾಲ್ಕು ಶಿಷ್ಯರನ್ನು ಹೇಗೆ ಆರಿಸಿಕೊಂಡನೆಂದು ಹೇಳುತ್ತದೆ. ಯೇಸು ಇಬ್ಬಿಬ್ಬರಾಗಿರುವ ಸಹೋದರರನ್ನು ಕರೆದಿರುವ ಸಮಾನ ಕಥೆಗಳು ಕೊಡಲಾಗಿದೆ: ಪೇತ್ರನು ಮತ್ತು ಅಂದ್ರೆಯನು (4:18-20) ಯಾಕೋಬ ಮತ್ತು ಯೋಹಾನ (4:21, 22). ಈ ಕಥೆಗಳು ಒಂದೇ ರೀತಿಯ ಮೂಲ ಅಂಶಗಳನ್ನು ಹೊಂದಿರುತ್ತವೆ: (1) ಯೇಸುವಿನ ಪ್ರಯತ್ನ, (2) ಆತನು ಸಹೋದರರನ್ನು ಗಮನಿಸುವಿಕೆ, (3) ಮೀನು ಹಿಡಿಯುವವರ ಕೆಲಸ, (4) ಶಿಷ್ಯತ್ವಕ್ಕೆ ಯೇಸುವಿನ ಆಹ್ವಾನ, ಮತ್ತು (5) ಶಿಷ್ಯರ ಪ್ರತ್ಯುತ್ತರ.[7]

ಇವರಲ್ಲಿ ಇಬ್ಬರನ್ನು ಯೇಸು ಸಂಧಿಸಿರುವದು ಪ್ರಥಮ ಬಾರಿಯಲ್ಲ. ಪೇತ್ರ ಮತ್ತು ಅಂದ್ರೆಯನು, ಅವರೊಂದಿಗೆ ಫಿಲಿಪ್ಪಿ ಮತ್ತು ನತಾನಿಯೇಲ, ಯೇಸು ದೀಕ್ಷಾಸ್ನಾನವಾದ ಮೇಲೆ ಗಲಿಲಾಯಕ್ಕೆ ಹಿಂತಿರುಗುವಾಗ ಇವರು ಯೇಸುವಿನ ಜೊತೆಗಿದ್ದರು (ಯೋಹಾನ 1:35-45). ಗಲಿಲಾಯದ ಕಾನಾದಲ್ಲಿ ಯೇಸು ಪ್ರಥಮ ಬಾರಿ ಅದ್ಭುತ ಕಾರ್ಯಮಾಡಿದಾಗ ಅಲ್ಲಿ ವಾಕ್ಯದಲ್ಲಿ ಪ್ರಸ್ತಾಪಿಸಿದ ಕನಿಷ್ಟ ನಾಲ್ಕು ಜನ ಶಿಷ್ಯರಿದ್ದರೆಂದು ತಿಳಿಸಲಾಗಿದೆ (ಯೋಹಾನ 2:1, 2).

ಶಿಷ್ಯನು ಎಂಬುವವನು, "ಹಿಂಬಾಲಕ" ಅಥವಾ ಯಾರನ್ನು ಹಿಂಬಾಲಿಸುವನೋ ಅವನ "ವಿದ್ಯಾರ್ಥಿ." ಶಿಷ್ಯರು ಗುರುಗಳನ್ನು ಆರಿಸಿಕೊಳ್ಳುವದು ಯೆಹೂದ್ಯರಲ್ಲಿ ಸಾಮಾನ್ಯವಾಗಿತ್ತು,[8] ಆದರೆ ಯೇಸು ಆರಿಸಿಕೊಂಡಂತೆ ಗುರುಗಳು ಶಿಷ್ಯರಿಗಾಗಿ ಹುಡುಕುವದು ಅಸಾಮಾನ್ಯವಾಗಿತ್ತು (ಯೋಹಾನ 15:16).[9] ಆತನ ಸೇವೆಯ ಪ್ರಾರಂಭದ ದಿನಗಳಲ್ಲಿ, ಯೇಸುವಿಗೆ ಬಹಳಷ್ಟು ಶಿಷ್ಯರಿದ್ದರು. ಬಹು ಸಂಖ್ಯೆಯಲ್ಲಿ ಆತನನ್ನು ಹಿಂಬಾಲಿಸಿದರು. ಆ ಸಮಯದಲ್ಲಿ, ಆತನು ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ತಾನು ಹೋಗಬೇಕೆಂದಿದ್ದ ಯೆಹೊದ್ಯರ ಪಟ್ಟಣಗಳಲ್ಲಿ ತನಗೆ ಮಾರ್ಗವನ್ನು ಸಿದ್ಧಪಡಿಸಲು ಮುಂದಾಗಿ "ಪರಿಮಿತವಾದ ಸೇವೆಗಾಗಿ" ಕಳುಹಿಸಿದನು (ಲೂಕ 10:1). ಒಂದು ಸಂದರ್ಭದಲ್ಲಿ ಶಿಷ್ಯರ ಈ ದೊಡ್ಡ ಗುಂಪಿನಿಂದ ಆರಿಸಿಕೊಂಡ ಹನ್ನೆರಡು ಮಂದಿ ಯೇಸುವಿನ ಅಪೊಸ್ತಲರಾದರು (ಲೂಕ 6:13-16; ನೋಡಿರಿ ಮತ್ತಾಯ 10:1-4). ಅವರಿಗೆ "ಅಪೊಸ್ತಲರೆಂದು" ಹೆಸರಿಟ್ಟನು, ಯಾಕೆಂದರೆ ಅವರನ್ನು ಆರಿಸಿಕೊಂಡನು, ಬಲಪಡಿಸಿದನು, ಮತ್ತು ಅಧಿಕಾರದೊಂದಿಗೆ ತನ್ನ ಪರವಾಗಿ ಕೆಲಸ ಮಾಡಲು ಕಳುಹಿಸಿದನು. ಆತನ ಕುರಿತು ಸಾಕ್ಷಿಕೊಡಲು ಯೇಸು ಆರಿಸಿಕೊಂಡ ಹನ್ನೆರಡು ಮಂದಿ ಆತನ ವೈಯಕ್ತಿಕ ರಾಯಭಾರಿಗಳಾದರು (ಅಪೊಸ್ತಲರ ಕೃತ್ಯಗಳು 1:8). 4:18-22ರಲ್ಲಿ ಯೇಸುವಿನಿಂದ ಕರೆಯಲ್ಪಟ್ಟ ನಾಲ್ಕು ಜನ ಶಿಷ್ಯರು ಆತನಿಗೆ ತುಂಬಾ ಹತ್ತಿರದ ಅಪೊಸ್ತಲರಾದರು (17:1; 26:37; ಮಾರ್ಕ 5:37; 13:3).

**ವಚನ 18. ಸೀಮೋಯೋನ** ಮತ್ತು ಆತನ ಸಹೋದರ **ಅಂದ್ರೆಯನ**ನ್ನು **ಯೇಸು** ಸಂದಿಸಿದಾಗ, ಅವರು ಮೀನು ಹಿಡಿಯುತ್ತಿದ್ದರು. ಅವರು ಉಪಯೋಗಿಸಿದ **ಬಲೆಯು** ವೃತ್ತಾಕಾರವಾಗಿತ್ತು ಮತ್ತು ಅದು ಸಿಸದಿಂದ ಮಾಡಿದ ಸಣ್ಣ ಉಂಡೆಯಿಂದ ಬಾರವಾಗಿತ್ತು.[10]

ಇವರು ಯಾಕೋಬ ಮತ್ತು ಯೋಹಾನ ಮತ್ತು ಅವರ ತಂದೆ ಜೆಬೆದಾಯನೊಂದಿಗೆ ಮೀನು ವ್ಯವಹಾರಮಾಡುವ ಕಾರ್ಯದಲ್ಲಿ ನಿರತರಾಗಿದ್ದರು (ಮಾರ್ಕ 1:20; ಲೂಕ 5:7, 10). ಸೀಮಿಯೋನ ಮತ್ತು ಅಂದ್ರೆಯನು ಮೊಟ್ಟ ಮೊದಲಿನಿಂದ ಬೆತ್ಸಾಯಿದವರು (ಯೋಹಾನ 1:44), ಆದರೆ ಇತ್ತಿಚೆಗಷ್ಟೆ ಅವರು ತಮ್ಮ ಮನೆಯನ್ನು ಕಪೆರ್ನೌಮನಲ್ಲಿ ಮಾಡಿದರು (8:5, 14; ಮಾರ್ಕ 1:21, 29; ಲೂಕ 4:31, 38).

ಯೇಸು ಸೀಮೋನನಿಗೆ "ಕೇಫ" (ಅರೆಮಿಕ್) ಅಥವಾ **ಪೇತ್ರ** (ಗ್ರೀಕ್) ಎಂದು ಹೆಸರಿಟ್ಟನು, ಅದರ ಅರ್ಥ "ಕಲ್ಲು" (ಯೋಹಾನ 1:42). ಆತನನ್ನು, "ನಿರೀಕ್ಷೆಯುಳ್ಳವನು, ಧೈರ್ಯವಂತನು, ಭರವಸೆಯುಳ್ಳವನು, ನಿರ್ಭಯನು, ಪ್ರಮಾಣಿಕನು, ಪ್ರೇರೆಪಣೆ ನೀಡುವವನು, ಶಕ್ತಿಯುಳ್ಳವನು, ಸತ್ವಯುಳ್ಳವನು, ಬಲಶಾಲಿ ಮತ್ತು ಪ್ರೀತಿಸುವವನು, ಮತ್ತು ಯೇಸು ಶಿಲುಬೆ ಮರಣ ಹೊಂದುವ ಮೊದಲು ಆತನನ್ನು ಬಿಟ್ಟುಬಿಟ್ಟರೂ ಸಹ, ತನ್ನ ಯಜಮಾನನಿಗೆ ನಂಬಿಗಸ್ತನಾಗಿರುವನು" ಎಂದು ಚಿತ್ರಿಸಲಾಗಿದೆ.[11]

"ಅಂದ್ರೆಯ" ಗ್ರೀಕ ಹೆಸರಾಗಿದೆ, ಇದಕ್ಕೆ "ಸಾಹಸಿ" ಅಥವಾ "ಪುರುಷತ್ವವುಳ್ಳ" ಎಂದು ಅರ್ಥವಾಗಿದೆ. ಕ್ರಿಸ್ತನನ್ನು ಹಿಂಬಾಲಿಸಿದ ಹನ್ನೆರಡು ಜನರಲ್ಲಿ ಈತನು ಮೊದಲಿಗನಾಗಿದ್ದನು (ಯೋಹಾನ 1:40). ಯೇಸುವಿಗೆ ಪರಿಚಯವಾಗುತ್ತಿದ್ದಂತೆಯೆ ತನ್ನ ಸಹೋದರನಾದ ಸೀಮೋನನನ್ನು ಹುಡುಕಿ ಕ್ರಿಸ್ತನಲ್ಲಿಗೆ ಕರೆದುಕೊಂಡು ಬಂದನು (ಯೋಹಾನ 1:41, 42). ಈತನನ್ನು ಆಗಾಗ ಸರಳವಾಗಿ "ಸಿಮಿಯೋನ ಪೇತ್ರನ ಸಹೋದರ" ಎಂದು ಹೇಳಲಾಗುತ್ತದೆ (ಯೋಹಾನ 1:40; 6:8; ನೋಡಿರಿ ಮತ್ತಾಯ 10:2; ಲೂಕ 6:14), ಆದರೆ ಈತನು ಪೇತ್ರನ ಹೊರತಾಗಿ ಇತರೆ ಬೇರೆ ಜನರನ್ನು ಕ್ರಿಸ್ತನೆಡೆಗೆ ನಡಿಸಿದನು ಎಂಬುದು ಗಮನಿಸುವಂಥದ್ದಾಗಿದೆ (ಯೋಹಾನ 6:8, 9; 12:20-22). ಅಂದ್ರೆಯನು ಸುಲಭ ದೃಷ್ಟಿಯುಳ್ಳವನು ಮತ್ತು ಸ್ವಾರ್ಥರಹಿತನೆಂದು ಗುರುತಿಸಲ್ಪಟ್ಟನು.

**ವಚನ 19.** ಪೇತ್ರ ಮತ್ತು ಅಂದ್ರೇಯನಿಗೆ, **ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು** ಎಂದು ಯೇಸು ಹೇಳಿದನು. ಗ್ರೀಕ್‌ನಲ್ಲಿ, "ಹಿಂಬಾಲಿಸು" ಎಂದು ಭಾಷಾಂತರಿಸುವ ಶಬ್ದವು, ಒಂದು ಬಲವಾದ ಆಜ್ಞೆಯ ಪರಿಣಾಮವನ್ನು ಕೊಂಡು ಒಯ್ಯುವ ಒಂದು ಸ್ಥಳದ ಕ್ರಿಯಾ ವಿಶೇಷಣಯಾಗಿದೆ. "ನನ್ನನ್ನು ಹಿಂಬಾಲಿಸು" ಎನ್ನುವ ಭಾಗವು "ನನ್ನ ಹಿಂದೆ ಬಾ" ಎಂದು ಅನುವಾದಿಸಬಹುದಾಗಿದೆ. ವಿದ್ಯಾರ್ಥಿಗಳು ಅಕ್ಷರಾಂಶವಾಗಿ ರಬ್ಬಿಗಳನ್ನು ಹಿಂಬಾಲಿಸಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕ್ರಮವಾಗಿ ಹೋಗಿ ಕಲಿಯುವದು ಸಾಮಾನ್ಯವಾಗಿತ್ತು. "ನಾನು ಮಾಡುವೆನು" ಎನ್ನುವದು ಯೇಸು ಅವರನ್ನು ಮುಂದೆ ಬರುವ ಸೇವೆಯಲ್ಲಿ ಸಿದ್ಧಪಡಿಸುವದನ್ನು ಸೂಚಿಸುತ್ತದೆ.

ಈ ಸಹೋದರರು ಮೀನುಗಳು ಹಿಡಿಯುವ ಮೀನುಗಾರರಾಗಿದ್ದರು, ಆದರೆ ಅವರು "ಮನುಷ್ಯರನ್ನು ಹಿಡಿಯುವ ಬೆಸ್ತರಾಗುತ್ತಾರೆ." ಇಂಥಹ ಸನ್ನಿವೇಶ ಕಾಣಿಸುವಾಗ ಕೆಲವು ಅಂಶಗಳನ್ನು ಲೂಕನು ಸೇರಿಸಿದ್ದಾನೆ (ಲೂಕ 5:1-11). ಅದ್ಭುತವಾಗಿ ಮೀನು ಹಿಡಿದ ನಂತರ - ಮೀನುಗಳು ರಾಶಿ ರಾಶಿಯಾಗಿ ಸಿಕ್ಕಿಕೊಂಡು ತುಂಬಿಸಲು ದೋಣಿಗಳು ಮುಣುಗುವ ಹಾಗಾದವು - ಯೇಸು ಸೀಮೋನನಿಗೆ, "ಅಂಜಬೇಡ, ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ ಎಂದು ಹೇಳಿದನು" (ಲೂಕ 5:10). ಮನುಷ್ಯರನ್ನು ಹಿಡಿಯುವ ಅಲಂಕಾರಿಕ ರೂಪಣೆಯ ಮೂಲವು ಹಳೆ ಒಡಂಬಡಿಕೆಯಲ್ಲಿದೆ, ಅಲ್ಲಿ ನ್ಯಾಯ ತೀರ್ಪಿನ ಉದ್ದೇಶಕ್ಕಾಗಿ ಜನರು ಕೂಡಿಬರುವರು (ಯೆರೆಮೀಯ 16:16; ಅಮೋಸ 4:2; ಹಬಕ್ಕೂಕ 1:14-17). ಹೊಸ ಒಡಂಬಡಿಕೆಯಲ್ಲಿ, ಈ ಅಲಂಕಾರಿಕೆ ರಕ್ಷಣೆ ಕುರಿತದ್ದಾಗಿದೆ, ಜನರನ್ನು ರಾಜ್ಯಕ್ಕೆ ಆಕರ್ಷಿಸುವಂಥದ್ದಾಗಿದೆ. ಮತ್ತಾಯ 13:47ರ ಸಾಮ್ಯವು ಸುವಾರ್ತಾ ಬಲೆಯನ್ನು ಹರಡುವದನ್ನು ಮತ್ತು ಕ್ರಿಸ್ತನಿಗಾಗಿ ಸಾಧ್ಯವಾದಷ್ಟು ಜನರನ್ನು ಸೆರೆ ಹಿಡಿಯುವದನ್ನು[12] ತಿಳಿಸುತ್ತದೆ. "ಕೆರೆಯಿಂದ ಮೀನು ಹಿಡಿಯುವ ಪ್ರಶ್ನೆಯೇ ಇಲ್ಲ. ಆದರೆ

ಮನುಷ್ಯರನ್ನು ಆಳವಾದ ಪಾಪದಿಂದ ಮತ್ತು ಮರಣದಿಂದ ತರುವದು, ಅವರನ್ನು ದೇವರ ದೊಡ್ಡ ಬಲೆಯಲ್ಲಿ ಹಿಡಿಯುವದು!"[13] ಎಂದು ಒಬ್ಬ ವ್ಯಾಖ್ಯಾನಗಾರನು ಹೇಳಿದ್ದಾನೆ. ಯೇಸು ಕೊಟ್ಟಿರುವ ಮಹಾನಿಯೋಗ - ಮೊದಲು ಅಪೊಸ್ತಲರಿಗೆ ಕೊಡಲ್ಪಟ್ಟಿತು ಆದರೆ "ಯುಗದ ಸಮಾಪ್ತಿಯವರೆಗೂ" ಆತನ ಹಿಂಬಾಲಕರಿಗೆ ಉದ್ದೇಶಿಸಲಾಯಿತ್ತು (28:20) - ಇದು ಆತನ ಎಲ್ಲಾ ಶಿಷ್ಯರಿಗಾಗಿರುವ ಆತನ ಆಸೆಯಾಗಿದೆ ಎಂದು ಯೇಸು ಸ್ಪಷ್ಟಪಡಿಸಿದರು.

**ವಚನ 20.** ಯಜಮಾನನ ಕರೆಯುವಿಕೆಗೆ ಪೇತ್ರ ಮತ್ತು ಅಂದ್ರೆಯನು ತಕ್ಷಣವೇ ಪ್ರತಿಕ್ರಿಯಿಸಿದರು. **ಅವರು ತಮ್ಮ ಬಲೆಗಳನ್ನು ಬಿಟ್ಟು ಆತನನ್ನು ಹಿಂಬಾಲಿಸಿದರು** ಎಂದು ಮತ್ತಾಯನು ಹೇಳುತ್ತಾನೆ. ಮತ್ತಾಯ 4:18ರಲ್ಲಿನ ನಿರ್ದಿಷ್ಟವಾದ ಶಬ್ದದಂಥಲ್ಲದೆ, "ಬಲೆಗಳು" ಎಂದು ಗ್ರೀಕ್ ಭಾಷೆಯಲ್ಲಿ ಭಾಷಾಂತರಿಸಿದ ಶಬ್ದವು ಈ ವಚನದಲ್ಲಿ ಸಾಮಾನ್ಯವಾಗಿದೆ ಮತ್ತು ಅದರಲ್ಲಿ ವಿವಿಧವಾದವುಗಳನ್ನು ಸೇರಿಸಲಾಗಿದೆ.

"ಎಲ್ಲವನ್ನು ಬಿಟ್ಟು ಆತನನ್ನು ಹಿಂಬಾಲಿಸಿದರು" ಎಂದು ಲೂಕ 5:11ರಲ್ಲಿ ಹೇಳುತ್ತದೆ. ತರುವಾಯ, ಅವರು ಮಾಡಿದ ತ್ಯಾಗವನ್ನು ಪೇತ್ರನು "ಎಲ್ಲಾವನು" ಎನ್ನುವ ಶಬ್ದದಿಂದ ವ್ಯಕ್ತಪಡಿಸಿದ್ದಾನೆ: "ಇಗೋ, ನಾವು ಎಲ್ಲಾ ಬಿಟ್ಟು ಬಿಟ್ಟು ನಿನ್ನನ್ನು ಹಿಂಬಾಲಿಸಿದೆವು ನಮಗೆ ಏನು ದೊರಕುವದು?" (19:27). ಅವರು ಏನೇನು ಬಿಟ್ಟು ಬಿಟ್ಟಿದ್ದಾರೋ ಅದಕ್ಕಿಂತಲೂ ಹೆಚ್ಚಿನ ಆಶೀರ್ವಾದಗಳು ತನ್ನ ಶಿಷ್ಯರಿಗೆ ಸಿಗುವುದೆಂದು ಯೇಸು ಪುನಃ ಅವರಿಗೆ ಭರವಸೆಕೊಟ್ಟನು (19:28-30).

**ವಚನಗಳು 21, 22.** ಯೇಸು ಅವರಿಗೆ ಭೇಟಿಯಾಗುವಾಗ **ಯಾಕೋಬ ಮತ್ತು ಯೋಹಾನನು, ಈ ಸಹೋದರರು ತನ್ನ ... ತಂದೆಯೊಂದಿಗೆ ದೋಣಿಯಲ್ಲಿದ್ದರು, ಅವರ ಬಲೆಗಳನ್ನು ಸರಿಮಾಡುತ್ತಿದ್ದರು.** ಕ್ರಿಯಾಪದ "ಸರಿಮಾಡು" ಎಂದರೆ "ಪುನಃ ಸೇರಿಸು" ಅಥವಾ "ಕ್ರಮವಾಗಿ ಜೋಡಿಸು" ಎಂದು ಅರ್ಥವಾಗಿದೆ. ಮೀನುಗಾರರ ಬಲೆಗಳ ವಿಷಯದಲ್ಲಿ, ಆ ಮಾತು ಸ್ವಚ್ಛಗೊಳಿಸುವದು ಅಥವಾ ಬಲೆಗಳನ್ನು ಮಡಿಚಿಡುವದು ಒಳಗೊಂಡಿರುತ್ತದೆ.

**ಅವರನ್ನು ಆತನು ಕರೆದನು** ಎಂದು ವಾಕ್ಯಭಾಗವು ಸರಳ ಮಾತಿನಲ್ಲಿ ಹೇಳುತ್ತದೆ. ಆತನು ಅವರಿಗೆ ಏನು ಹೇಳಿದ್ದಾನೆಂಬುದು ನಮಗೆ ತಿಳಿಸದ್ದಿದರೂ, ಆ ಇಬ್ಬರಿಗೆ ಹೇಳಿದ್ದನ್ನೆ ಇವರಿಗೂ ಸಹ ಹೇಳಿದ್ದಾನೆಂದು ಗ್ರಹಿಸಿಕೊಳ್ಳುವದು ಯೋಗ್ಯವಾದದ್ದಾಗಿದೆ: "ನನ್ನ ಹಿಂದೆ ಬನ್ನಿರಿ ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು" (4:19). ಅವರ ಪ್ರತಿಕ್ರಿಯೆಯೂ ಸಹ ಪೇತ್ರ ಮತ್ತು ಅಂದ್ರೆಯನಂತೆ ಇತ್ತು: **ತಕ್ಷಣವೇ ಬಿಟ್ಟು ... ಮತ್ತು ಆತನನ್ನು ಹಿಂಬಾಲಿಸಿದನು.** ಅವರು ಆತನ ಅಪೊಸ್ತಲರಾಗುವದಕ್ಕಾಗಿ ಎಲ್ಲವನ್ನು ಬಿಟ್ಟರು - ಅವರು ಮೀನು ಹಿಡಿಯುವ ಉದ್ಯೋಗ, ಮನೆಗಳು ಮತ್ತು ಕುಟುಂಬಗಳನ್ನು ಬಿಟ್ಟು ಬಿಟ್ಟರು (19:27-30).

ದೇವರ ವಾಕ್ಯದಲ್ಲಿ ಯಾಕೋಬ ಮತ್ತು ಯೋಹಾನನ ತಂದೆಯಾದ **ಜೆಬದಾಯಿ**ನನ್ನು ನೇರವಾಗಿ ಸಂಧಿಸುವದು ಈ ಒಂದು ಸ್ಥಳದಲ್ಲಿ ಮಾತ್ರವೆ. ಆತನ ಹೆಸರಿಗೆ "ಯೆಹೋವನ ಬಹುಮಾನ" ಎಂದು ಅರ್ಥ. ಆತನ ಹೆಂಡತಿ ಸಲೋಮಿ ಬಹುಶಃ ಯೇಸುವಿನ ತಾಯಿಯಾದ ಮರಿಯಳ ಸಹೋದರಿ ಆಗಿರಬಹುದು (27:56; ಮಾರ್ಕ 15:40; ಯೋಹಾನ 19:25). ಇದು ನಿಜವೇ ಆಗಿದ್ದರೆ, ಯಾಕೋಬ ಮತ್ತು ಯೋಹಾನನಿಗೆ ಯೇಸು ಚಿಕ್ಕಮ್ಮನ ಮಗನಾಗಿ ಸಹೋದರನಾಗುವನು. ಯೇಸು ಅವರಿಗೆ ಕರೆದಾಗ ಅವರು ತಕ್ಷಣವೇ ಯಾಕೆ ಆತನನ್ನು ಹಿಂಬಾಲಿಸಿದರು ಮತ್ತು ಅವರ ತಂದೆಯು ಯಾಕೆ ಅಡ್ಡಿಪಡಿಸಲಿಲ್ಲ ಎಂಬುದನ್ನು ವಿವರಿಸಲು ಈ ಭೌತಿಕ ಸಂಬಂಧ ಸಹಾಯಮಾಡುತ್ತದೆ.

ಯಾಕೋಬನಿಗೆ ಮತ್ತು ಯೋಹಾನನಿಗೆ "ಬೋವನೆರ್ಗೆಸ್" ಎಂಬುದು ಒಂದು ಅಡ್ಡ ಹೆಸರು, ಅದರ ಅರ್ಥವು "ಗುಡುಗಿನ ಪುತ್ರರು" (ಮಾರ್ಕ 3:17). ಯೇಸುವನ್ನು ನಿರಾಕರಿಸಿದ ಸಮಾರ್ಯಪಟ್ಟದಲ್ಲಿ ಪರಲೋಕದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ

ಎಂದಾಗ ಅವರ ತೀಕ್ಷಣವಾದ ಸ್ವಭಾವ, ಅವರ ತಕ್ಷಣದ ಮತ್ತು ಒರಟಾದ ಸ್ವಭಾವವು ತೋರಿಸಲ್ಪಟ್ಟಿತು (ಲೂಕ 9:51-56). ಯಾಕೋಬ ಮತ್ತು ಯೋಹಾನನು ಸಹ ಅವರ ಮಹಾತ್ವಾಕಾಂಕ್ಷೆಯನ್ನು ವರ್ಣಿಸಿದ್ದಾನೆ. ಅವರ ತಾಯಿಯ ಮುಖಾಂತರ ದೇವರ ರಾಜ್ಯದಲ್ಲಿ ಉನ್ನತವಾದ ಸ್ಥಾನಮಾನ ಕೊಡಬೇಕೆಂದು ಯೇಸುವಿಗೆ ಕೇಳಿಕೊಂಡರು (20:20-28; ಮಾರ್ಕ 10:35-45). ಯೇಸುವಿನೊಂದಿಗೆ ಸಮಯ ಕಳೆದ ಅವರ ಜೀವಿತ ಬದಲಾಯಿತು. ಯೋಹಾನನು "ಯೇಸುವಿಗೆ ಪ್ರಿಯನಾಗಿದ್ದ ಒಬ್ಬನೆಂದು" ಗುರುತಿಸಲ್ಪಟ್ಟನು (ಯೋಹಾನ 13:23; 20:2; 21:7, 20-24), ಮತ್ತು ಯಾಕೋಬನು ರಕ್ತಸಾಕ್ಷಿಯಾದ ಅಪೊಸ್ತಲರಲ್ಲಿ ಮೊದಲಿಗನಾಗಿದ್ದನು (ಅಪೊಸ್ತಲರ ಕೃತ್ಯಗಳು 12:1, 2).

## ಗಲಿಲಾಯದಲ್ಲಿ ಪ್ರಾರಂಭದ ಸೇವೆ (4:23-25)

**23ಬಳಿಕ ಯೇಸು ಗಲಿಲಾಯದಲೆಲ್ಲಾ, ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ, ಪರಲೋಕರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಜನರ ಎಲ್ಲಾತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು. 24ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ ಹಬ್ಬಿದ್ದರಿಂದ; ಮೈಯಲ್ಲಿ ನೆಟ್ಟಗಿಲ್ಲದವರನ್ನು, ಅಂದರೆ ತರತರದ ರೋಗಬಾಧೆಗಳಿಂದ ಕಷ್ಟಪಡುವವರನ್ನು ದೆವ್ವ ಹಿಡಿದವರನ್ನೂ ಮೂರ್ಛಾರೋಗಿ ಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರತಂದರು; ಆತನು ಅವರನ್ನು ಸ್ವಸ್ಥಮಾಡಿದನು. 25ಮತ್ತು ಗಲಿಲಾಯದ ದೆಕಪೊಲಿ ಯೆರೂಸಲೇಮ್ ಯುದಾಯ ಎಂಬೀ ಸ್ಥಳಗಳಿಂದಲೂ ಯೊರ್ದನ್‌ಹೊಳೆಯ ಆಚೇ ಕಡೆಯಿಂದಲೂ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು.**

ಮತ್ತಾಯನು ಈಗ ಯೇಸು ಗಲಿಲಾಯದಲ್ಲಿ ಮಾಡಿದ ಮೊದಲ ಸೇವೆಯ ಕಡೆ ಗಮನ ಹರಿಸಿದ್ದಾನೆ. ತನ್ನ ಸುವಾರ್ತೆ ಉದ್ದಕ್ಕೂ ಸಂಕ್ಷಿಪ್ತವಾದ ಸಾರಂಶಗಳನ್ನು ಒಳಸೇರಿಸಿದ್ದಾನೆ (4:23-25; 8:16, 17; 9:35; 12:15, 16; 14:14, 35, 36; 15:29-31; 19:1, 2; 21:14).

**ವಚನ 23.** ಪಾಲೇಸ್ತೀನದ (ನೋಡಿರಿ 4:15ರ ವ್ಯಾಖ್ಯಾನದ ಮೇಲೆ) ಉತ್ತರ ಭಾಗದಲ್ಲಿರುವ **ಗಲಿಲಾಯದಲ್ಲೆಲ್ಲಾ ಯೇಸು** ಸಂಚಾರ ಮಾಡಿದವುಗಳಲ್ಲಿ ಇದು ಮೊದಲನೆಯದಾಗಿದೆ (ನೋಡಿರಿ 9:35-11:1; ಲೂಕ 8:1-3). ಆ ಪ್ರದೇಶದಲ್ಲಿ ಅನ್ಯ ಜನಸಾಂದ್ರತೆಯು ಹೆಚ್ಚಾಗಿದ್ದರೂ, ಯೇಸು ಯೆಹೂದ್ಯ ಸಭಾ ಮಂದಿರಗಳಲ್ಲಿ **ಬೋಧಿಸುತ್ತಿದ್ದನು** ಮತ್ತು **ವಾಕ್ಯ ಸಾರುತ್ತಿದ್ದನು** ಎಂಬುದು ಸ್ಪಷ್ಟವಾಗಿದೆ (9:35; 12:9; 13:54), ಆತನ ಸೇವೆಯು ಯೆಹೂದ್ಯರಿಗೆ ಪರಿಮಿತವಾಗಿದೆ (10:5, 6; 15:21-28).

ಸದ್ಯದಲ್ಲಿ, ಕ್ರಿ.ಪೂ. 200ರವರೆಗೆ ಇತಿಹಾಸದಲ್ಲಿ ದಾಖಲಾಗಿರಲಿಲ್ಲವಾದರೂ,[14] ಬಾಬೇಲ್ ಸೆರೆವಾಸದ ಸಮಯದಲ್ಲಿ ಯೆಹೂದ್ಯ ಸಭಾಮಂದಿರಗಳನ್ನು ಉಪಯೋಗಿಸುತ್ತಿದರೆಂದು ನಂಬಲಾಗಿದೆ. ಅವರು ಯೆಹೂದ್ಯ ಧಾರ್ಮಿಕ ಜೀವನ ಕೇಂದ್ರವನ್ನು ರಚಿಸಿಕೊಂಡರು. ಅವುಗಳು ಆ ದಿನಗಳಲ್ಲಿ "ಸಭೆ"ಗಳಾಗಿದ್ದವು, ಅಲ್ಲಿ ಜನರು ದೇವರ ವಾಕ್ಯವನ್ನು ಕೇಳುವದಕ್ಕಾಗಿ ಮತ್ತು ಚರ್ಚೆ ಮಾಡುವದಕ್ಕಾಗಿ ಸಬ್ಬತ್ ದಿನದಂದು ಜನರೆಲ್ಲರು ಕೂಡಿ ಬರುತ್ತಿದ್ದರು. Mishnah ಪ್ರಕಾರ, ಎಲ್ಲಿ ಹತ್ತು ಜನ ಯೆಹೂದ್ಯ ಗಂಡಸರು ಇರುತ್ತಾರೋ, ಅಲ್ಲಿ ಸಭಾಮಂದಿರ ಇರಬಹುದಾಗಿತ್ತು.[15] ಯೆರೂಸಲೇಮಿನ ನಾಶನ ಕ್ರಿ.ಶ. 70ರಲ್ಲಿ ಆಗುವದಕ್ಕಿಂತ ಮುಂಚಿತವಾಗಿ ಅಲ್ಲಿ 480 ಯೆಹೂದ್ಯ ಮಂದಿರಗಳಿದ್ದವೆಂದು ಯೆರೂಸಲೇಮಿನ ಟಾಲಮಡ್[16] ದಾಖಲಿಸಿದೆ; ಮತ್ತು 394 ಯೆಹೂದ್ಯ ಸಭಾ ಮಂದಿರಗಳಿದ್ದವೆಂದು[17] ಬಾಬೇಲಿನ ಟಾಲಮಡ್ ಹೇಳುತ್ತದೆ.

ಆದರ್ಶ ಧ್ಯೇಯವಾಗಿ, ಈ ಮಂದಿರವು ಪಟ್ಟಣದ ಮಧ್ಯಭಾಗದಲ್ಲಿ ಇರುತ್ತಿತ್ತು ಇದನ್ನು ಎಲ್ಲರೂ ಸರಳವಾಗಿ ನೋಡಲು ಒಂದು ಗುಡ್ಡದ ಮೇಲೆ ಕಟ್ಟುತ್ತಿದ್ದರು.[18] ಆದಾಗ್ಯೂ, ಈ ಪದ್ಧತಿಯು ಯಾವಾಗಲೂ ಅನುಸರಿಸಲು ಸಾಧ್ಯವಾಗರಲಿಲ್ಲ. ಧರ್ಮಾಚರಣೆಯ ಶುದ್ಧಿಕರಣಕ್ಕೆ ಅನುಕೂಲವಾಗುವಂತೆ ಈ ಮಂದಿರ ಒಂದು ನದಿ ಅಥವಾ ಸಮುದ್ರದ ಹತ್ತಿರದಲ್ಲಿ ನಿರ್ಮಿಸುತ್ತಿರುವದು ಇದರ ಇನ್ನೊಂದು ಸದುದ್ದೇಶವಾಗಿದೆ.

ಈ ಸಭಾಮಂದಿರಗಳು "ಆಡಳಿತಗಾರ" ರಿಂದ ಅಥವಾ "ಅಧಿಕಾರಗಳಿಂದ" ನಡಿಸಲ್ಪಡುತಿದ್ದವು (ಮಾರ್ಕ 5:22; ಲೂಕ 8:41; ಅಪೊಸ್ತಲರ ಕೃತ್ಯಗಳು 18:8, 17). ಈ ಕೂಟವನ್ನು ಏರ್ಪಾಡಿಸುವದು ಮತ್ತು ಕ್ರಮಬದ್ಧತೆ ಕಾಪಾಡುವದಕ್ಕೆ ನಾಯಕರು ಜವಾಬ್ದಾರಿಯುಳ್ಳವರಾಗಿದ್ದರು (ಲೂಕ 13:14). ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಗ್ರಂಥಗಳು ಓದಿದ ನಂತರ, ಸಭಾಮಂದಿರದ ಆಡಳಿತಗಾರರು ಅತಿಥಿಯಾಗಿ ಬಂದಿರುವ ರಬ್ಬಿಯನ್ನು ಅವರು ಸಭೆಯನ್ನು ಉದ್ದೇಶಿಸಿ ಮಾತಾಡುವದಕ್ಕೆ ಆಹ್ವಾನ ಕೊಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 13:15; ನೋಡಿರಿ ಲೂಕ 4:16-27). ಜನರಿಗೆ ಮಾತಾಡುವಂತೆ ಈ ಸಂಪ್ರದಾಯವು ಯೇಸುವಿಗೆ ಮತ್ತು ತನ್ನ ಅಪೊಸ್ತಲರಿಗೆ ಅವಕಾಶಮಾಡಿಕೊಟ್ಟಿತು.

ಯೇಸು ಲೇಖನಗಳಿಂದ ಬೋಧಿಸುತ್ತಿದ್ದನು, ಆದರೆ ಆತನು **ದೇವರ ರಾಜ್ಯದ ಕುರಿತು ಸಾರುತ್ತಿದ್ದನು.** "ಸುವಾರ್ತೆ" ಎಂಬ ಶಬ್ದಕ್ಕೆ "ಶುಭ ಸಂದೇಶ" ಎಂಬ ಅರ್ಥವಿದೆ. ವಚನ 17ರಲ್ಲಿ ಇದೇ ಸಂದೇಶ ಸೂಚಿಸಲಾಗಿದೆ: "ಪರಲೋಕ ರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ." ಇನ್ನು ದೇವರ ರಾಜ್ಯ ಕಾಣಿಸದೆ ಇದ್ದರೂ, ಅದು ಹತ್ತಿರವಾಗಿತ್ತು ಮತ್ತು ಬೇಗನೆ ಬರುವಂಥದ್ದಾಗಿತ್ತು, ಯೇಸು ಬೋಧಿಸಿದ ಆ ಜನರು ಇನ್ನು ಜೀವಂತವಾಗಿರುವಾಗಲೇ ಬರುವಂಥದಾಗಿತ್ತು (ನೋಡಿರಿ ಮಾರ್ಕ 9:1). "ಮೇಲಣ ಲೋಕವನ್ನೇರಿದ ದಿನದವರೆಗೆ" ಯೇಸು ಈ ಸಂದೇಶವನ್ನು ಸಾರುತ್ತಿದ್ದನ್ನು, ಮತ್ತು "ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು" (ಅಪೊಸ್ತಲರ ಕೃತ್ಯಗಳು 1:2, 3).

ಆತನು ಕೇವಲ ಸಾರಿಹೇಳುವದು ಮತ್ತು ಬೋಧಿಸುವುದು ಮಾತ್ರವಲ್ಲ, ಆದರೆ **ಜನರ ಎಲ್ಲಾತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು.** ಯೇಸುವಿನ ಅದ್ಭುತಗಳು ಸ್ನಾನಿಕನಾದ ಯೋಹಾನನಿಂದ ವ್ಯತ್ಯಾಸವುಳ್ಳವನ್ನನಾಗಿ ಮಾಡಿದ್ದವು. ಸ್ನಾನಿಕನಾದ ಯೋಹಾನನು ಅದ್ಭುತ ಕಾರ್ಯಗಳು ಮಾಡಲಿಲ್ಲ ಯಾವುದೇ ಮೂಲವಾಗಿದ್ದರೂ ಅಥವಾ ಮೂಲಧಾರವಾಗಿದ್ದರೂ ಯೇಸು ಯಾವುದೇ ತರದ ರೋಗ ಬೇನೆಗಳನ್ನು ಗುಣಪಡಿಸಲು ಸಮರ್ಥನಾಗಿದ್ದನು. ಆತನ ಬಲವು ದೇವರಿಂದ ಕಳಿಸಲ್ಪಟ್ಟ ಮೆಸ್ಸೀಯನೆಂದು ಗುರುತಿಸುವ ಚಿಹ್ನೆಯಾಗಿತ್ತು (11:2-6).

**ವಚನ 24.** ಯೇಸು ಮಾಡಿದ ಈ ಅದ್ಭುತಗಳ ನೇರವಾದ ಫಲಿತಾಂಶದಿಂದ ಯೇಸುವಿನ ಖ್ಯಾತಿ **ಸಿರಿಯಾದಲ್ಲೆಲ್ಲಾ ಪ್ರಸಿದ್ಧವಾಗಿ ಹರಡಿತು.** ಮೊದಲನೆಯ ಶತಮಾನದಲ್ಲಿ "ಸಿರಿಯಾ" ದೇಶದೊಂದಿಗೆ ಪಾಲೇಸ್ತೀನ ಒಳಗೊಂಡ ವಿಶಾಲವಾದ ರೋಮಾ ಪ್ರಾಂತವನ್ನು ಸೂಚಿಸುತ್ತದೆ (ಲೂಕ 2:2). ಇಲ್ಲಿ ಕೇವಲ ಗಲಿಲಾಯದ ಉತ್ತರಕ್ಕಿರುವ ಒಂದು ದೇಶವೆಂದು ಕೆಲವರು ನಂಬುವಾಗ 4:25ರಲ್ಲಿ ಹೇಳಿರುವ ದೇಶಗಳು ಅದರ ಸುತ್ತಾಮುತ್ತಾ ಇರುವದು ಸೂಚಿಸುತ್ತದೆ.

ಯೇಸುವಿನ ಕೀರ್ತಿಯೊಂದೆ ಇಡೀ ಪ್ರಾಂತದಲ್ಲಿರುವ ರೋಗಿಗಳನ್ನೂ ಮತ್ತು ಬೇನೆಯುಳ್ಳವರನ್ನೂ ಕರೆದುಕೊಂಡು ಬರಲು ಕಾರಣವಾಯಿತು, **ದೆವ್ವಹಿಡಿದವರು, ಮೂರ್ಛೆರೋಗದವರು** ಮತ್ತು **ಪಾರ್ಶ್ವವಾಯು** ಒಳಗೊಂಡಿದ್ದರು. ಇಂತಹ ಬೇರೆ ಬೇರೆ ಜನರ ಪ್ರಸಾಪನೆ ಯೇಸು ನಾನಾ ವಿಧವಾದ ರೋಗಗಳ ಮೇಲೆ ಅಧಿಕಾರವನ್ನು ಹೊಂದಿದನು ಮತ್ತು ಗುಣಪಡಿಸಲು ಯಾವುದೇ ಇತಿಮಿತಿ ಆತನಿಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

**ವಚನ 25.** ಆತನು ಹೊದಕಡೆ ಎಲ್ಲಾ ಜನ ಸಮೂಹವು ಹಿಂಬಾಲುಸುತ್ತಿದ್ದ ಫಲಿತವಾಗಿ ಯೇಸು ಜನಪ್ರಿಯನಾದನು. ಈ ಜನರು ಕೇವಲ **ಗಲಿಲಾಯದಿಂದ** ಬಂದಿರಲಿಲ್ಲ ಆದರೆ ಪಾಲೇಸ್ತೀನ ಎಲ್ಲಾ ಕಡೆಯಿಂದ ಬಂದವರಾಗಿದ್ದರು.

**ದೆಕಪೋಲಿ** ಇದು ಯೋರ್ದನ್ ಆಚೆ ಇರುವ ಜಿಲ್ಲೆಯಾಗಿತ್ತು, ಅದನ್ನು ಗ್ರೀಕ್ ಅರ್ಥವುಳ್ಳ ಹೆಸರಿನಿಂದ ಕರೆಯುತ್ತಿದ್ದು ಅದು ಹತ್ತು ಪಟ್ಟಣಗಳನ್ನು ಒಳಗೊಂಡಿತ್ತು. ಹೆಲೆನಿಷ್ಟಕ್ಕೆ ಸಂಬಂಧ ಪಟ್ಟಿರುವ ಈ ಪಟ್ಟಣಗಳನ್ನು ದಮಸ್ಕಸ್, ಫಿಲಿದೆಲ್ಫಿಯಾ, ರಪಾನಹ, ಸ್ಕೆಥೋಪೊಲಿಜ (ಬೆಥ್ಸಹಿನ್), ಗದಾರ, ಹಿಪ್ಸೆಸ್, ಡಿಯೋನ, ಪೆಲ್ಲಾ, ಗೆರಾಸ, ಮತ್ತು ಕಾನಾಡ ಹಿರಿಯನಾಗಿರುವ Pliny ರಿಂದ ಗುರುತಿಸಲ್ಪಟ್ಟಿವೆ.[19] ದೆಕಪೋಲಿಯು ಮಹಾನಾಯಕ ಅಲೆಗ್ಸಾಂಡರ ಸೈನಿಕ ನಿಪುಣರಿಂದ ಜನ ನಿಬಿಡವಾಗಿತ್ತು, ಈ ಪಟ್ಟಣದಲ್ಲಿ ಗ್ರೀಕ್ ಸಂಸ್ಕೃತಿ ಕಾಪಾಡಲು ಸಹಾಯವಾಯಿತ್ತು ಎಂದು ಸಾಮಾನ್ಯವಾಗಿ ನಂಬಲಾಗಿದೆ. ಸ್ಕೆಥೋಪೊಲಿಜನ್ನು ಈ ದೇಶವು ಯೋರ್ದಾನಿಗೆ ಪಶ್ಚಿಮ ಭಾಗದಲ್ಲಿದೆ, ಉಳಿದ ಪಟ್ಟಣಗಳು ಯೋರ್ದಾನಿನ ಪೂರ್ವಭಾಗದಲ್ಲಿವೆ.

ಯೇಸುವಿನ ಬೋಧನೆಯ ಮಾತುಗಳನ್ನು ಕೇಳಲು ಜನರು ಬಹಳ ದೂರದಿಂದ ಬರುತ್ತಿದ್ದರೆಂದು ಮತ್ತಾಯನು ಮುಂದುವರೆಸಿ ಒತ್ತಿ ಹೇಳುವಾಗ ಆತನು **ಯೆರೂಸಲೇಮ**, **ಯೂದಾ ಮತ್ತು ಯೋರ್ದಾನ** ("ಯೋರ್ದಾನ ಆಚೆಯ ಪ್ರಾಂತ"; NIV) ಆಚೆ ಪ್ರದೇಶಗಳನ್ನು ಪ್ರಸ್ತಾಪಿಸಿದನು. ಈ ಅಂತಿಮ ವಾಕ್ಯ ಭಾಗವು ಪೆರಿಯಾವನ್ನು ಸೂಚಿಸುತ್ತದೆ.

## ಪಾಠಗಳು

## ನಾಶವಾಗುವವರಿಗಾಗಿ ದೇವರ ಯೋಜನೆ: ಬೋಧಿಸುವದು (4:12-25)

ಯೇಸುವಿನ ದೀಕ್ಷಾಸ್ನಾನ ಮತ್ತು ಶೋಧನೆಗಳ ನಂತರ, ಆತನು ಬೋಧಿಸುತ್ತಾ, ಸಾರಿಹೇಳುತ್ತಾ, ಮತ್ತು ಗುಣಪಡಿಸುತ್ತಾ ಗಲಿಲಾಯದಲ್ಲಿ ತನ್ನ ಸೇವೆಯನ್ನು ಪ್ರಾರಂಭ ಮಾಡಿದನು. ಆತನು ತನ್ನ ಶಿಷ್ಯರಾಗುವದಕ್ಕಾಗಿ ಕೆಲವು ಮೀನು ಗಾರರನ್ನು ಕರೆದನು. ನಮ್ಮ ವಾಕ್ಯಭಾಗದಿಂದ ಈ ಕೆಲವು ಪ್ರಮುಖ ಪಾಠಗಳನ್ನು ನಾವು ಕಲಿಯಬಹದು:

1. ನಾಶವಾಗುವವರಿಗಾಗಿ ದೇವರ ವಾಕ್ಯವನ್ನು ಬೋಧಿಸುವುದೆ ದೇವರ ಯೋಜನೆಯಾಗಿದೆ (4:12-17).
2. ನಮಗಿಂತ ಮುಂಚೆ ಇದ್ದವರ ಸ್ಥಳವನ್ನು ನಾವು ತುಂಬಬೇಕು (4:12, 17).
3. ದೇವರ ಯೋಜನೆ ಮುಂದುವರಿಯಲು ನಮ್ಮ ಸ್ಥಳದಲ್ಲಿ ಮುಂದುವರಿಯಲು ಇತರರನ್ನು ಆರಿಸಿಕೊಂಡು ಅವರಿಗೆ ತರಬೇತಿ ಕೊಡುವದು ಅವಶ್ಯವಾಗಿದೆ (4:18-22).
4. ಯೇಸು ತನ್ನ ಬೋಧನೆಯಲ್ಲಿ ಯಾವುದನ್ನು ಪ್ರಾಮುಖ್ಯವೆಂದು ಮಾನ್ಯ ಮಾಡಿದನೋ ಅದನ್ನೇ ನಾವು ಕೇಂದ್ರಿಕರಿಸಬೇಕು (4:17, 23).
5. ನಿಜವಾದ ಅದ್ಭುತಗಳು ಮತ್ತು ಪುರಾವೆಯಿಲ್ಲದೆ ಸುಳ್ಳುಗಾರರು, ಮೋಸಗಾರರು ಮಾಡುವ ಪ್ರಯತ್ನಗಳ ಮಧ್ಯದಲ್ಲಿರುವ ವ್ಯತ್ಯಾಸವನ್ನು ನಾವು ತಿಳಿದುಕೊಳ್ಳ ಬೇಕು (4:23, 24).

ಟಿಪ್ಪಣಿಗಳು

[1]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 80. [2]ನಜರೇತಿನಲ್ಲಿ ಯೇಸುವಿನ ನಿರಾಕರಣೆಯು ಮತ್ತಾಯನು ವರದಿ ಮಾಡಿರುವದಿಲ್ಲ ಇಲ್ಲಿಯವರೆಗೆ 13:53-58. [3]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 73. [4]Josephus *Life* 45; *Wars* 3.3.2. [5]Josephus *Life* 17. [6]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 74. [7]Hagner, 76. [8]Mishnah *Aboth* 1.16. [9]ಯೇಸು ಮೀನುಗಾರರನ್ನು ಕರೆದನು ಮತ್ತು ಎಲಿಯನು ಹೊಲಉಳುವ ಎಲಿಷನನ್ನು ಅವನ ಕುಟುಂಬ ಕರೆಯುವದರ ಮಧ್ಯದಲ್ಲಿರುವ ಹೋಲಿಕೆ ಗಮನಿಸಿರಿ (1 ಅರಸು 19:19-21). [10]Lewis, 74.

[11]James M. Gray, "Peter, Simon," in *The International Standard Bible Encyclopedia*, ed. James Orr (Grand Rapids, Mich.: Wm. B. Eerdmans Publishing Co., 1939), 4:2349. [12]Douglas R. A. Hare, *Matthew,* Interpretation (Louisville: John Knox Press, 1993), 31. ಒಂದು ಬಲೆಯ ಹೋಲಿಕೆಯಲ್ಲಿ (13:47-50), ದೇವದೂತರ ಜವಾಬ್ದಾರಿ ಒಳ್ಳೆ ಮೀನುಗಳನ್ನು (ನಂಬಿಕೆಯುಳ್ಳವರು) ಕೆಟ್ಟ ಮೀನುಗಳಿಂದ (ಅಪನಂಬಿಗಸ್ತರು) ಬೇರ್ಪಡಿಸುವುದಾಗಿದೆ. [13]Suzanne de Dietrich, *The Gospel According to Matthew*, trans. Donald G. Miller, Layman's Bible Commentary, vol. 16 (Richmond, Va.: John Knox Press, 1961), 26. [14]Ecclesiasticus 51:23. [15]Mishnah *Megillah* 1.3; 4.3; *Sanhedrin* 1.6; *Aboth* 3.6. [16]Jerusalem Talmud *Megillah* 3.1. Mishnah ದಿಂದ ತೆಗೆದುಕೊಂಡಿದ್ದು, ಹಾಗೂ Gemara (Mishnahದ ವಿಂಗಡಣೆ) ಗಳು (1) ಯೆರೂಸಲೇಮಿನ Talmudಗೆ (2) ಬಾಬೇಲೋನಿನ Talmudಗೆ ಸಂಗ್ರಹಿಸಲಾಗಿದೆ (ಈ ವ್ಯಾಖ್ಯಾನದಲ್ಲಿ "Talmud" ಎಂದು ಕರೆಯಲಾಗಿದೆ). [17]Talmud *Ketuboth* 105a. [18]Talmud *Shabbath* 11a. [19]Pliny *Natural History* 5.16.74.